<u>ಎಸ್.ಸಿ. ನಂ. 78/2019</u>

**<u>ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಿದ ದಿನಾಂಕ 19.12.2023</u>**

<u>ಮುಂದುವರಿದ ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ</u>

1. ಚಾಸಾ.1 ರವರಿಗೆ ವರದಕ್ಷಿಣೆ ಕಿರುಕುಳ ಕೊಡುತ್ತಿದ್ದ ಬಗ್ಗೆ ಅವರ ತಂದೆ ತಾಯಿಗೆ ವಿಷಯ ತಿಳಿಸಿ ದೂರು ಕೊಡಿಸುವ ಪ್ರಯತ್ನ ಮಾಡಿಲ್ಲ. ಚಾಸಾ.1 ಆರೋಪಿತರ ಮೇಲೆ ಭಾಗಾಂಶ ಕೇಳಿ ಮಳವಳ್ಳಿ ನ್ಯಾಯಾಲಯದಲ್ಲಿ ಕೇಸು ಹಾಕಿದ್ದಾರೆಂದರೆ ಗೊತ್ತಿಲ್ಲ. ಚಾಸಾ.1 1 ನೇ ಆರೋಪಿಯ ವಿರುದ್ಧ ಮಳವಳ್ಳಿ ನ್ಯಾಯಾಲಯದಲ್ಲಿ ಜೀವನಾಂಶ ಕೇಸು ಹಾಕಿದ್ದಾಳೆ ಎಂದರೆ ಸರಿ. 1 ನೇ ಆರೋಪಿ ವ್ಯಾಪಾರದಲ್ಲಿ ನಷ್ಟ ಉಂಟಾಗಿದ್ದರಿಂದ ಅಂಗಡಿ ಬಾಗಿಲು ಹಾಕಿದ್ದರು ಎಂದು ನಾನು ಪೊಲೀಸರ ಮುಂದೆ ಹೇಳಿಕೆಯಲ್ಲಿ ಹೇಳಿದ್ದೇನೆ. ನಮ್ಮ ಗ್ರಾಮದಿಂದ ಮಳವಳ್ಳಿಗೆ 5 ಕಿ.ಮೀ. ಆಗುತ್ತದೆ. ಮಳವಳ್ಳಿಯಲ್ಲಿ ಸರ್ಕಾರಿ ಆಸ್ಪತ್ರೆ ಇದೆ ನಮ್ಮ ಊರಿನಲ್ಲಿ ಇಲ್ಲ. ನೆಲಮಾಗನಹಳ್ಳಿಯಿಂದ ಕೆ.ಎಂ.ದೊಡ್ಡಿ ಮುಖಾಂತರ ಮಳವಳ್ಳಿಗೆ ಹೋಗಬೇಕಾಗುತ್ತದೆ ಎಂದರೆ ಸರಿಯಲ್ಲ. ಆ ದಿನದಂದು ಆಟೋದಲ್ಲಿ ಚಾಸಾ.1 ರವರನ್ನು ಮಳವಳ್ಳಿಗೆ ಕರೆದುಕೊಂಡು ಹೋಗಿದೆ, ಅದು ಯಾರಿಗೆ ಸೇರಿದ್ದು ಎಂದು ನನಗೆ ಗೊತ್ತಿಲ್ಲ.

2. ಚಾಸಾ.1 ರವರು 1 ನೇ ಆರೋಪಿಗೆ ಮಗನನ್ನು ಸಿಟಿಯಲ್ಲಿ ಓದಿಸಬೇಕೆಂದು ಬಲವಂತ ಮಾಡುತ್ತಿದ್ದಳು ಎಂದರೆ ಸರಿಯಲ್ಲ, ಆ ಸಮಯದಲ್ಲಿ 1 ನೇ ಆರೋಪಿ ತಂದೆ ಲಕ್ವ ಹೊಡೆದು ಹಾಸಿಗೆ ಹಿಡಿದಿದ್ದರು ಎಂದರೆ ಸರಿ. ಅವರನ್ನು ನೋಡಿಕೊಳ್ಳಬೇಕು ಹಾಗೂ ಮಗನನ್ನು ಮಳವಳ್ಳಿಯಲ್ಲಿ ಸೇರಿಸಬೇಕೆಂದು ಗಲಾಟೆ ಮಾಡುತ್ತಿದ್ದಳು ಎಂದರೆ ಸರಿಯಲ್ಲ. 1 ನೇ ಆರೋಪಿ ಸಂಸಾರವನ್ನು ಮಳವಳ್ಳಿಗೆ ಸಿಫ್ಟ್ ಮಾಡದೇ ಇದ್ದುದ್ದರಿಂದ ಆರೋಪಿತರ ಮೇಲೆ ಚಾಸಾ.1 ರವರಿಗೆ ದ್ವೇಷ ಇತ್ತು ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ಕಿರುಕುಳ ಕೊಡದೇ ಇದ್ದರೂ ಸುಳ್ಳು ಕೇಸು ಹಾಕಲಾಗಿದೆ ಎಂದರೆ ಸರಿಯಲ್ಲ. ಯಾವತ್ತೂ ಚಾಸಾ.1 ನಮ್ಮ ಊರಿಗೆ ಬಂದಿರಲಿಲ್ಲ ಎಂದರೆ ಸರಿಯಲ್ಲ. ಚಾಸಾ.1 ರವರ ಅತ್ತೆ ಮಾವ ನಮ್ಮ ಮನೆಯಲ್ಲಿ ಯಾವತ್ತೂ ಇರಲಿಲ್ಲ ಎಂದರೆ ಸರಿಯಲ್ಲ. ಮಧ್ಯರಾತ್ರಿ ಆರೋಪಿ ಬಂದು ಗಲಾಟೆ ಮಾಡಿದ್ದ ನು ಎಂದು ಸುಳ್ಳು ಹೇಳಿದ್ದೇನೆಂದರೆ ಸರಿಯಲ್ಲ.

3. ಆರೋಪಿತರು ಚಾಸಾ.1 ರವರ ಮೇಲೆ ಸೀಮೆಎಣ್ಣೆ ಎರಚಿರುವುದಿಲ್ಲ, ಯಾವುದೇ ಗಲಾಟೆ ಆಗುರುವುದಿಲ್ಲ ಎಂದರೆ ಸರಿಯಲ್ಲ. ಈ ವಿಷಯದಲ್ಲಿ ಚಾಸಾ.1 ರವರನ್ನು ನಾನು ಆಸ್ಪತ್ರೆಗೆ ಸೇರಿಸಿರಲಿಲ್ಲ ಎಂದರೆ ಸರಿಯಲ್ಲ. ಯಾವುದೇ ಘಟನೆ ನಡೆಯದೇ ಇದ್ದರೂ ಸಿವಿಲ್ ಕೇಸಿಗೆ ಅನುಕೂಲವಾಗಲೀ ಎಂದು ಚಾಸಾ.1 ಸುಳ್ಳು ಕೇಸು ನೀಡಿದ್ದಾರೆಂದರೆ ಸರಿಯಲ್ಲ. ಎಲ್ಲಾ ಸತ್ಯ ಸಂಗತಿ ತಿಳಿಸಿದ್ದರೂ ಕೂಡ ಚಾಸಾ.1 ನನ್ನ ಸಂಬಂಧಿಯಾದ್ದರಿಂದ ಚಾಸಾ.1 ರವರಿಗೆ ಸಹಾಯವಾಗಲೀ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಕಳೆದ ಬಾರಿ ಹಾಗೂ ಇಂದು ನ್ಯಾಯಾಲಯಕ್ಕೆ ಚಾಸಾ.1 ರವರ ತಾಯಿ ಬಂದಿದ್ದರು ಎಂದರೆ ಸರಿ. ಪೊಲೀಸರಿಗೆ ಯಾವುದೇ ಹೇಳಿಕೆ ಕೊಟ್ಟಿಲ್ಲದೇ ಇದ್ದರೂ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಆರ್ಥಿಕವಾಗಿ ಚಾಸಾ.1 ರವರಿಗಿಂತ ಆರೋಪಿತರೇ ಸಬಲರಾಗಿದ್ದರು ಎಂದರೆ ಸರಿಯಲ್ಲ. ಚಾಸಾ.1 ರವರ ತಂದೆ ಅನುಕೂಲಸ್ಥರು ಆಗಿರಲಿಲ್ಲ ಎಂದರೆ ಸರಿಯಲ್ಲ. ಹೀಗಾಗಿ ಆರೋಪಿತರು ವಧು ದಕ್ಷಿಣೆ ಕೊಟ್ಟು ಮದುವೆ ಮಾಡಿಕೊಟ್ಟಿದ್ದರು ಎಂದರೆ ಸರಿಯಲ್ಲ. ಎಲ್ಲಾ ವಿಷಯ ತಿಳಿದಿದ್ದರೂ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

(ಮರು ವಿಚಾರಣೆಃ ಇಲ್ಲ.)
(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ.)

ಓ.ಹೇ.ಕೇ.ಸ.ಒ.

(ನಿರ್ಮಲ .ಕೆ.)
C/c 5 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮಂಡ್ಯ.